ಹಾಳಾಗಿರುವ ರಸ್ತೆಗಳ ಬಗ್ಗೆ

11(393):

ಶ್ರೀ ರಾಜೇಂದ್ರ ವರ್ಮಾ (ಹುಲಸೂರು): ಮಾನ್ಯ ಲೋಕೋಪಯೋಗಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರ ತಿಳಿಸುವರೆ?

ಅ) ಬೀದರ್ ಜಿಲ್ಲೆ ಹುಲಸೂರು ಕ್ಷೇತ್ರದ ವ್ಯಾಪ್ತಿಯಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಅತ್ಯಂತ ಕೆಟ್ಟ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕಿ.ಮಿ. ರಸ್ತೆಯನ್ನು ಇಲಾಖೆಯು ನಿರ್ವಹಿಸುತಿತ್ತು?

ಇ) ಕಳೆದ ಮೂರು ವರ್ಷಗಳಲ್ಲಿ ಈ ರಸ್ತೆಗಳ ನಿರ್ವಹಣೆಗೆ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು? (ಪ್ರತಿ ವರ್ಷದ ವೆಚ್ಚದ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು) ಇದೇ ಅವಧಿಯಲ್ಲಿ ಎಷ್ಟು ಹೊಸ ರಸ್ತೆಗಳನ್ನು ನಿರ್ಮಿಸಲಾಗಿದೆ?

ಈ) ಮಳೆಗಾಲದ ಸಮಯದಲ್ಲಿ ಸರಿಯಾದ ರಸ್ತೆ ಸಂಪರ್ಕವಿಲ್ಲದೆ ಜಿಲ್ಲೆಯ ಇತರ ತಾಲ್ಲೂಕುಗಳೊಂದಿಗೆ ಸಂಪರ್ಕಗಳು ಕಡಿದು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಹಾಗಿದ್ದಲ್ಲಿ ಈ ಭಾಗದಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹಲವೆಡೆ ರಸ್ತೆ ಕೆಟ್ಟಿರುವುದು ಸರ್ಕಾರ ಗಮನಕ್ಕೆ ಬಂದಿದೆ.

ಆ) ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 138.50 ಕಿ.ಮಿ. ರಸ್ತೆ ಬರುತ್ತದೆ. ಅದರಲ್ಲಿ

ರಾಜ್ಯ ಹೆದ್ದಾರಿ	33.00 ಕಿ.ಮಿ.
ಜಿಲ್ಲಾ ಮುಖ್ಯ ರಸ್ತೆ	106.50 ಕಿ.ಮಿ.
ಒಟ್ಟು	138.50 ಕಿ.ಮಿ.

ಇ) (ಲಕ್ಷ ರೂ.ಗಳಲ್ಲಿ)

	96-97	97-98	98-99
ರಾಜ್ಯ ಹೆದ್ದಾರಿ	18.62	20.46	36.01
ಜಿಲ್ಲಾ ಮುಖ್ಯ ರಸ್ತೆ	12.52	19.97	32.75
ಒಟ್ಟು	31.14	40.43	68.76

ಇದೇ ಸಮಯದಲ್ಲಿ ಹೊಸ ರಸ್ತೆಗಳ ನಿರ್ಮಾಣ ಮಾಡಿರುವುದಿಲ್ಲ ನಬಾರ್ಡ್ ಯೋಜನೆ ಅಡಿ 2 ಗ್ರಾಮೀಣ ರಸ್ತೆಗಳ ಅಭಿವೃದ್ಧಿಯನ್ನು 71.20 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದೆ.

ಈ) ಅಂತಹ ಯಾವುದೇ ರಸ್ತೆಗಳು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಇರುವುದಿಲ್ಲ.

ಉ) ಲೋಕೋಪಯೋಗಿ ಇಲಾಖೆಯು ಈ ರಸ್ತೆಗಳ ಉಸ್ತುವಾರಿ ನಿರ್ವಹಿಸುತ್ತಿದೆ, ಹಾಗು ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲಾಗಿದೆ. ಕೇಂದ್ರ ಅಭಾವ ಪರಿಹಾರ (CRF) ಅನುದಾನದಲ್ಲಿ 30.00ಲಕ್ಷ ರೂ.ಗಳ ಕಾಮಗಾರಿಗಳು ಹಾಗೂ 75.00 ಕೋಟಿ ರೂ.ಗಳ ಕಾರ್ಯಕ್ರಮದಡಿ 73.50 ಲಕ್ಷ ರೂ.ಗಳ ಕಾಮಗಾರಿಗಳು ಮಂಜೂರಾಗಿದ್ದು ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಶ್ರೀ ರಾಜೇಂದ್ರವರ್ಮ: ಮಾನ್ಯ ಅಧ್ಯಕ್ಷರೆ, ನಾನು ಕೇಳಿದಂಥ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಮಾನ್ಯ ಸಚಿವರು ಈ ಸದನದಲ್ಲಿ ಬಹಳ ಹಿರಿಯರಾಗಿದ್ದು, ತಮ್ಮ ಇಲಾಖಾ ವತಿಯಿಂದ ಸದ್ಯದಲ್ಲಿ ಯಾವ್ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಮಾಡುತ್ತೇವೆಂದು ಉತ್ತರದಲ್ಲಿ ತಿಳಿಸಿರುವುದಕ್ಕೆ ನನ್ನ ಸ್ವಾಗತವಿದೆ. ಆದರೆ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುಮಾರು 28 ಹಳ್ಳಿಗಳಿಗೆ ಹೋಗಲು ಮತ್ತು ಬರುವುದಕ್ಕೆ ಯಾವುದೇ ಸೂಕ್ತ ವ್ಯವಸ್ಥೆ ಇರುವುದಿಲ್ಲ. ಆ ಭಾಗದಲ್ಲಿ ಬರುವ ಮಾಂಜ್ರಾ ನದಿಗೆ ಅಡ್ಡಲಾಗಿ ಒಂದು ಸೇತುವೆ ನಿರ್ಮಾಣ ಮಾಡುವುದು ಬಹಳ ಜರೂರಾಗಿದೆ. ಏಕೆಂದರೆ, ಮಳೆಗಾಲದಲ್ಲಿ ನದಿ ನೀರು ಉಕ್ಕಿ ಹರಿಯುವುದರಿಂದ ಸುಮಾರು ಆರು ತಿಂಗಳುಗಳ ಕಾಲ ನದಿಯ ಅತ್ತ ಕಡೆ ಇರುವ ಜನರು ಇತ್ತ ಕಡೆಗೆ. ಬರಲಾರದೆ ಅವರು ಅಲ್ಲಿ ಬೆಳೆಯತಕ್ಕಂಥ ಪದಾರ್ಥಗಳೆಲ್ಲವೂ ಕರ್ನಾಟಕಕ್ಕೆ ಬಾರದೇ ಪಕ್ಕದ ಮಹಾರಾಷ್ಟ್ರ ರಾಜ್ಯದ ಸರ್ಕಾರಕ್ಕೆ

ಹೋಗುತ್ತಿರುವಂಥ ಪರಿಸ್ಥಿತಿ ಇರುವುದರಿಂದ, ಸುಮಾರು ಐವತ್ತು ವರ್ಷಗಳಿಂದ ಆ ಭಾಗದಲ್ಲಿ ರಸ್ತೆಗಳ ಹಾಗೂ ಸೇತುವೆಯ ಸೌಕರ್ಯವಿಲ್ಲದೆ ಆ ಭಾಗದಲ್ಲಿ ವಾಸಿಸುವ ಬಹಳಷ್ಟು ಜನರು ಸೊರಗಿ ಹೋಗಿರುವುದರಿಂದ ಈ ಬಗ್ಗೆ ಮಾನ್ಯ ಸಚಿವರು ಹೆಚ್ಚಿನ ರೀತಿಯಲ್ಲಿ ಗಮನಹರಿಸಿ ಸದರಿ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಧರ್ಮ್‌ಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ ಮಾಂಜ್ರಾ ನದಿಯ ಬಗ್ಗೆ ಪ್ರಸ್ತಾಪವಿರುವುದಿಲ್ಲ. ಆದರೂ ಕೂಡ ಆಂಧ್ರಪ್ರದೇಶ ಮತ್ತು ಕರ್ನಾಟಕ ಎರಡೂ ರಾಜ್ಯಗಳೂ ಕೂಡಿ ಶೇಕಡ ಐವತ್ತೈವತ್ತರಷ್ಟು ಹಣದ ಪಾಲು ಹೂಡಿ ರಸ್ತೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ತಿಳಿಸಿದಂತೆ ಅವರು ಕ್ಷೇತ್ರದ ಬೇರೆ ಭಾಗಗಳಲ್ಲಿ ರಸ್ತೆ ನಿರ್ಮಾಣವಾಗಬೇಕೆಂಬ ಅವರ ಭಾವನೆ ಏನಿದೆ, ಇವೊತ್ತು ಜಿಲ್ಲಾ ಪಂಚಾಯಿತಿಗಳ ವ್ಯಾಪ್ತಿಗೆ ಬರುವ ರಸ್ತೆಗಳಲ್ಲದೆ, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವ ರಸ್ತೆಗಳೂ ಇದ್ದು, ಆದ್ಯತೆ ಮೇಲೆ ಇದರ ಬಗ್ಗೆ ಗಮನಹರಿಸುತ್ತಿದ್ದೇವೆ. ಅಲ್ಲದೆ, ನಬಾರ್ಡ್ ಯೋಜನೆಯಲ್ಲೂ ಕೂಡ ರಸ್ತೆ ನಿರ್ಮಾಣ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದೇವೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರ ಪ್ರಶ್ನೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸಲು ತಮ್ಮ ಅನುಮತಿ ಕೇಳುತಿದ್ದೇನೆ.

ಅಧ್ಯಕ್ಷರು: ಈಗ ಸಮಯ ಮುಗಿದುಹೋಗಿರುವುದರಿಂದ ಮುಂದಿನ ಯಾವುದಾದರೂ ದಿವಸದಲ್ಲಿ ಅದನ್ನು ತೆಗೆದುಕೊಳ್ಳೋಣ. ಸಂಬಂಧಪಟ್ಟ ಮಾನ್ಯ ಸದಸ್ಯರೇ ಸದನದಲ್ಲಿ ಉಪಸ್ಥಿತರಿದ್ದಂಥ ಸಂದರ್ಭದಲ್ಲಿ ಇನ್ನೊಂದು ದಿವಸ ತೆಗೆದುಕೊಳ್ಳೋಣ.

ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳು

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ದಿನಾಂಕ 20.3.2000ರಂದು ಲಿಖಿತ ಮೂಲಕ ಉತ್ತರಿಸಲಾಗುವ 130 ಪ್ರಶ್ನೆಗಳ ಪೈಕಿ 91 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇವೆ.